ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆ: 5883/2022 CW-6 PW- 5

| | |
|---|---|
| ಹೆಸರು | ರಾಮಣ್ಣ |
| ತಂದೆಯ ಹೆಸರು | ಶ್ಯಮಣ್ಣ |
| ವಯಸ್ಸು | 52 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ ಸ್ಥಳ | ಗಾಂಧಿನಗರ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ:**22-07-2026**

ಮುಖ್ಯ ವಿಚಾರಣೆ: ಸ ಸ ಅ ಅವರಿಂದ

ಚಾ.ಸಾ. 1 ನನ್ನ ತಂಗಿ. ಚಾ.ಸಾ. 7 ರಿಂದ 11 ರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನ ಪರಿಚಯ ಇದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

ಚಾ.ಸಾ. 1 2008 ರಲ್ಲಿ ಹರ್ಬಲ್ ಪ್ರೋಡಕ್ಟ್ ಕಂಪನಿ ಬಳ್ಳಾರಿಯಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿ ಮತ್ತು ಚಾ.ಸಾ. 1 ಪರಸ್ಪರ ಪ್ರೀತಿ ಮಾಡುತ್ತಿದ್ದರು. ಈ ವಿಚಾರ ನಮಗೆ 1 ವರ್ಷದ ನಂತರ ಗೊತ್ತಾಗಿರುತ್ತದೆ. ನನ್ನ ತಂಗಿಗೆ ಮನೆಗೆ ಮದುವೆ ಮಾಡುತ್ತೇವೆ ಎಂದು ಕರೆದರೂ ಅವರು ಬರಲಿಲ್ಲ, ಇಬ್ಬರು ಬೆಂಗಳೂರಿಗೆ ಹೋಗಿ ಮದುವೆ ಮಾಡಿಕೊಂಡರು. ಕೂಡ್ಲಗೇಟ್ ಬೆಂಗಳೂರಿನ ಶಿವಾಲಯದಲ್ಲಿ ಮದುವೆ ಮಾಡಿಕೊಂಡು 2 ವರ್ಷಗಳ ಕಾಲ ಚೆನ್ನಾಗಿದ್ದರು. ಅದರ ನಂತರ ಬಳ್ಳಾರಿ ಜಿಲ್ಲೆಯ ಕೂಡ್ಲಗಿ ತಾಲೂಕಿನ ಚಿಕ್ಕಜೋಗಿ ಹಳ್ಳಿಗೆ ಬಂದು ವಾಸವಾಗಿದ್ದರು. ಆ ಕಾಲಕ್ಕೆ ನನ್ನ ತಂಗಿ ಆರೋಪಿ ಆಕೆಗೆ ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ ಎಂದು ನಮಗೆ ಹೇಳಿದ್ದಕ್ಕೆ ನಾನು ಆರೋಪಿತನಿಗೆ ಸರಿಯಾಗಿ ಹೊಂದಿಕೊಂಡು ಹೋಗು ಎಂದು ಹೇಳಿದ್ದೇನು. ದಿ: 11-02-2022 ರಂದು ಚಾ.ಸಾ. 1 ನನಗೆ ಫೋನ್ ಮಾಡಿ ಆರೋಪಿ ಆಕೆಗೆ ಹಿಂಸೆ ಕೊಡುತ್ತಿದ್ದಾನೆಂದು ಹೇಳಿದ್ದಳು. ಅದೇ ದಿನ ಬೆ. 9-00 ಕ್ಕೆ 1 ನೇ ಆರೋಪಿ ಮತ್ತು ಶೋಭಾ ಇವರು ಚಾ.ಸಾ. 1 ರಿಗೆ ತೊಂದರೆ ಕೊಟ್ಟಿರುತ್ತಾರೆ.

2 ನೇ ಆರೋಪಿತಳ ಗುರುತಿಸುವಿಕೆಗೆ ಆರೋಪಿತರ ಪರ ವಕೀಲರ ತಕರಾರು ಇರುವ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ. ಹೇ. ಕೇ. ಸರಿ ಇದೆ,

1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,

ಸಿಂಧನೂರು.